ಹೆಚ್ಚಿಗೆ ಬರಲಿಕ್ಕೆ ಸಾಧ್ಯವಾಗುತ್ತದೆ. ಇವತ್ತೇನಾಗಿದೆ ಎಂದರೆ, ನಮಗೆ ಬಿಲ್ ತುಂಬುವುದಕ್ಕೂ ಕಷ್ಟವಾಗಿದೆ. ಆ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಡಾ:ಎ.ಬಿ. ಮಾಲಕರೆಡ್ಡಿ:- ಅದನ್ನೇ ನಾನು ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಆಯಿತು. ಅದನ್ನು ನಾನು ಒಪ್ಪಿಕೊಂಡಿದ್ದೇನೆ.

ಡಾ:ಎ.ಬಿ. ಮಾಲಕರೆಡ್ಡಿ:- ಈಗ ಆ ಏರಿಯಾದಲ್ಲಿ ಬರಗಾಲವಿದೆ. ಜನರು ಕಷ್ಟಕ್ಕೆ ತುತ್ತಾಗಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:- ಒಂದು ಎಕರೆ ಕೂಡ irrigation ಆಗಿಲ್ಲವೆಂದು ಹೇಳಿದಿರಿ. ನಾನು ಕೂಡಲೇ ಅದನ್ನು enquiry ಮಾಡಿಸಿ, ವರದಿ ತರಿಸಿ, ನಿಮಗೆ ವರದಿ ಕಳುಹಿಸಿಕೊಡುತ್ತೇನೆ.

ಸುವರ್ಣ ಕನ್ನಡ ಭವನಕ್ಕಾಗಿ ಹೆಚ್ಚುವರಿ ಹಣದ ಅಗತ್ಯತೆ.

52 : (132)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)

a. Is the Government aware of the additional funds required for completion of suvarna kannada Bhavan at Sedam;
b. When is the Government going to release the additional funds?

ಶ್ರೀ ಗೋವಿಂದ ಎಂ. ಕಾರಜೋಳ
(ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವರು)

ಅ. ಬಂದಿದೆ.

ಆ. ಪ್ರಾದೇಶಿಕ ಮಟ್ಟದಲ್ಲಿ ನಾಲ್ಕು ಸುವರ್ಣ ಕರ್ನಾಟಕ ಭವನಗಳನ್ನು ನಿರ್ಮಿಸಲು ತಾತ್ವಿಕ ಅನುಮೋದನೆ ನೀಡಿ ರೂ.5.00 ಕೋಟಿ ಒದಗಿಸಿದ್ದು, ಪ್ರತಿಯೊಂದು ಭವನಕ್ಕೆ ರೂ.1,25 ಕೋಟಿಗಳಂತೆ ಒಟ್ಟು ರೂ.5.00 ಕೋಟಿಗಳನ್ನು ನಿಗದಿಪಡಿಸಿ ಬಿಡುಗಡೆ ಮಾಡಲಾಗಿರುತ್ತದೆ. ಹಾಗೆಯೇ

ಸೇಡಂ ಸುವರ್ಣ ಕನ್ನಡ ಭವನ ನಿರ್ಮಾಣವನ್ನು ರೂ.1.25 ಕೋಟಿ ಅನುದಾನದಲ್ಲಿ ಮಾಡಬೇಕೆಂದು ಸರ್ಕಾರ ಷರತ್ತು ವಿಧಿಸಿದೆ.

ಹೆಚ್ಚುವರಿ ಅನುದಾನ ಬಿಡುಗಡೆ ಬಗ್ಗೆ ಪರಿಶೀಲಿಸಲಾಗುವುದು.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ನನ್ನದೊಂದು simple question ಇತ್ತು. ಏನೆಂದರೆ, ರಾಜ್ಯಸರ್ಕಾರ ಈ ರಾಜ್ಯದಲ್ಲಿ ನಾಲ್ಕು ಕಡೆ ಗಡಿಭಾಗದಲ್ಲಿ ಸುವರ್ಣಭವನವನ್ನು ಕಟ್ಟಬೇಕೆಂದು ನಿರ್ಧಾರ ಮಾಡಿತ್ತು. ಅದರಂತೆ ನನ್ನ ಮತಕ್ಷೇತ್ರವಾದ ಸೇಡಂನಲ್ಲಿ ಒಂದು ಸುವರ್ಣಭವನ sanction ಆಗಿತ್ತು. ಅದಕ್ಕೆ ನಾನು ಮಂತ್ರಿಯವರಿಗೆ ಆಗಲೇ ಧನ್ಯವಾದ ಹೇಳಿದ್ದೇನೆ. ಅದಕ್ಕೆ ೧.೨೫ ಕೋಟಿ ರೂ sanction ಮಾಡಿದ್ದರು. ಈಗ ಏನಾಗಿದೆ ಎಂದರೆ ಆ ಭವನದ ನಿರ್ಮಾಣ ವಿಳಂಬವಾಗಿ ಪ್ರಾರಂಭವಾಗಿದೆ. ಏಕೆಂದರೆ, ಅಲ್ಲಿ ಸ್ವಲ್ಪ ಸ್ಥಳ ಲಭ್ಯತೆ ಇರಲಿಲ್ಲ. ನಾನು ಮತ್ತೆ agriculture department ನವರಿಗೆ request ಮಾಡಿ ಅವರ ಹತ್ತಿರ ಇರುವ ಎರಡು ಎಕರೆ ಜಾಗವನ್ನು ನಿಮ್ಮ ಇಲಾಖೆಗೆ ಕೊಡಿಸಿದ್ದೆ. ಅಲ್ಲಿ ಒಳ್ಳೆಯ ಭವನ ಆಗಬೇಕೆಂಬ ಉದ್ದೇಶ ಇತ್ತು. Tender ಸ್ವಲ್ಪ ತಡವಾಗಿ ಆಯಿತು. ಆ structure ಪ್ರಾರಂಭವಾಗಿ ಮುಗಿಯುವ ಹಂತಕ್ಕೆ ಬಂದಿದೆ ಅಂದರೆ ಅರ್ಧ ಹಂತಕ್ಕೆ ಬಂದಿದೆ. ಆದರೆ, ಅದನ್ನು ಪೂರ್ಣಗೊಳಿಸಲು ಇನ್ನೂ ೩ ಕೋಟಿ ರೂಪಾಯಿಗಳು ಬೇಕು. ಅದಕ್ಕೆ ನಮ್ಮ ಸಚಿವರು ೧.೨೫ ಕೋಟಿ ರೂ.ಗಳಿಗೆ ಸೀಮಿತ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ, ಆ ರೀತಿ ಆದೇಶದಲ್ಲಿ ಇಲ್ಲ. ಏಕೆಂದರೆ, ಅವರು ಕೊಟ್ಟಿರುವ ಹಣದಲ್ಲಿ ನಿಮ್ಮ ಇಲಾಖೆಯವರೇ design ಮಾಡಿದ್ದಾರೆ. ನಾವು ಮಾಡಿಸಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರೇ design ಮಾಡಬೇಕೆಂದು ಹೇಳಿದರು. ಅವರ design ಪ್ರಕಾರವೇ estimate ಮಾಡಿಸಿದ್ದೇವೆ.PWD ಯವರು tender ಕರೆದರು. ಅದಾದಮೇಲೆ ನಾನು ಒಂದು ಸಾರಿ inspection ಗೆ ಹೋದೆ. ನೋಡಿದಾಗ ಕೆಲಸ ಅರ್ಧಕ್ಕೆ ನಿಂತಿರುವುದು ಗೊತ್ತಾಯಿತು. ಕೇಳಿದಾಗ ಸರ್, ಇದು ಪೂರ್ತಿ ಆಗಬೇಕಾದರೆ ಇನ್ನೂ ೩ ಕೋಟಿ ರೂ. ಬೇಕೆಂದು ಹೇಳಿದರು.

ಏಕೆ ಅರ್ಧಕ್ಕೆ ನಿಲ್ಲಿಸಿದಿರಿ ಎಂದು ಕೇಳಿದ್ದಕ್ಕೆ ಎಷ್ಟು ಲಭ್ಯತೆ ಇದೆ ಅಷ್ಟಕ್ಕೆ ಮಾಡಬೇಕಾಗಿತ್ತು ಎಂದು ಹೇಳಿದ್ದೆ. ಆದರೆ, ಈಗ ಸಚಿವರು ಎಷ್ಟು ಹಣ ಲಭ್ಯವಿದೆ ಅಷ್ಟಕ್ಕೇ ಮುಗಿಸಬೇಕೆಂದು ಹೇಳಿದ್ದಾರೆಂದರು. ನನ್ನ ಮನವಿ ಇಷ್ಟೆ, ಅವರು ಸ್ಪಷ್ಟವಾದ categorical assurance ಕೊಡಲಿ. ನಾನು ಹಣಬಿಡುಗಡೆ ಮಾಡುತ್ತೇನೆಂದರೆ, I do not mind, ಇದರಲ್ಲಿ ನನ್ನದೇನೂ ಬೇರೆ ತಕರಾರಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ನಾವು ೧.೨೫ ಕೋಟಿ ರೂ. Unit cost ಎಂದು fix ಮಾಡಿ ಹಣ ಕೊಟ್ಟಮೇಲೆ ಅಷ್ಟರಲ್ಲಿಯೇ ಕಟ್ಟಡ ಕಟ್ಟಬೇಕು. ಇವರು ೫ ಕೋಟಿ ರೂ.ನಲ್ಲಿ ಕಟ್ಟುತ್ತೇನೆಂದರೆ ಇಡೀ ವರ್ಷಕ್ಕೆ ಬಜೆಟ್ ಇರುವುದೇ ೪ಕ್ಕೆ ೫ ಕೋಟಿ ರೂ. ಇವರು ಒಬ್ಬರೇ ೫ ಕೋಟಿ ರೂ. ಕೇಳಿದರೆ ಎಲ್ಲಿಂದ ತರುವುದು? ನಾನು ತಮ್ಮ ಮೂಲಕ ಮಾನ್ಯ ಶಾಸಕರಿಗೆ ವಿನಿಂತಿಸುವುದೇನೆಂದರೆ, ಈಗ ಸಂಸತ್ ಸದಸ್ಯರಿಗೆ ೫ ಕೋಟಿ ರೂ. ಬರುತ್ತದೆ. ಶಾಸಕರ ನಿಧಿಯಲ್ಲಿ ೧ ಕೋಟಿ ರೂ. ಬರುತ್ತದೆ. ಅವರಿಬ್ಬರೂ ಮನಸ್ಸು ಮಾಡಿದರೆಂದರೆ, ಒಂದೇ ವರ್ಷದಲ್ಲಿ ಇದು ಮುಗಿಯುತ್ತದೆ.ಏನಾದರೂ finishing items ಮತ್ತು ಸಣ್ಣಪುಟ್ಟ ಏನಾದರೂ ಬೇಕಾದರೆ ಸುಣ್ಣಬಣ್ಣ ಬೇಕಾದರೆ ಇನ್ನು ಸ್ವಲ್ಪ ಅಂದರೆ ೫೦ ಸಾವಿರ ರೂ. ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- Design approve ಮಾಡುವಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರೇ approve ಮಾಡಿದ್ದಾರೆ. PWD ಯವರು estimate ಮಾಡಿದ್ದಾರೆ. ಈಗ ಅರ್ಧಕ್ಕೆ building ಕೆಲಸ ನಿಂತಿದೆ. ಸಂಸತ್ ಸದಸ್ಯರ ನಿಧಿಯಿಂದ ಅಷ್ಟು ಹಣವನ್ನು ಒಂದೇ building ಕಾಮಗಾರಿಗೆ ಕೊಡುವುದಕ್ಕಾಗುವುದಿಲ್ಲ. ಶಾಸಕರ ನಿಧಿಯಿಂದ ನನ್ನ ಹತ್ತಿರ ಇರುವ ಒಂದು ಕೋಟಿ ರೂ.ಗಳನ್ನೇ ಕೊಡುತ್ತೀರಿ ನೀವು.ಇದಕ್ಕೆ PWD ಮಂತ್ರಿಯವರಾದರೂ ಹೇಳಲಿ, ಮಾನ್ಯ ಸಚಿವರಾದರೂ ಹೇಳಲಿ.

ಶ್ರೀ ಸಿ.ಎಂ. ಉದಾಸಿ :-ಇವರು ಗಲಾಟೆ ಮಾಡಿ estimate ಮಾಡಿಸಿರಬೇಕು. ಹಣ ಕೇಳಲಿಕ್ಕೆ ಈ ರೀತಿ ಮಾಡಿರಬೇಕು. ಇಲ್ಲದೇ ಹೋದರೆ ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ನಾನು ಏನೂ ಗಲಾಟೆ ಮಾಡಿಲ್ಲ. I want a categorical assurance.

ಅಧ್ಯಕ್ಷರು: ಅವರ ಹತ್ತಿರ ಮಾತನಾಡಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- Atleast assurance ಅನ್ನಾದರೂ ಕೊಡಲಿ.

ಅಧ್ಯಕ್ಷರು:- ಹಣ ಇಲ್ಲವೆಂದು ಹೇಳುತ್ತಿದ್ದಾರೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ೫೦% ಹಣವನ್ನಾದರೂ ಕೊಡುತ್ತೇವೆಂದರೆ ಇನ್ನುಳಿದ ೫೦% ಹಣಕ್ಕೆ ಬೇರೆ ಏನಾದರೂ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಾನು ತಮ್ಮ ಮೂಲಕ ಮಾನ್ಯ ಶಾಸಕರಿಗೆ ವಿನಂತಿಸುವುದೇನೆಂದರೆ, ಸಂಸತ್ ಸದಸ್ಯರ ನಿಧಿಯಿಂದ ೧.೫೦ ಕೋಟಿ ರೂ. ಕೊಡಲಿ, ಮಾನ್ಯ ಸದಸ್ಯರು ತಮ್ಮ ನಿಧಿಯಿಂದ ೫೦ ಲಕ್ಷ ರೂ. ಕೊಡಲಿ, ಒಟ್ಟು ೨ ಕೋಟಿ ಹಣ ಸಾಕಷ್ಟು ಆಗುತ್ತದೆ. ಈ ಹಣದಲ್ಲಿ ಎಲ್ಲವೂ ಮುಗಿಯುತ್ತದೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ೩ ಕೋಟಿ ರೂ.ಗಳಲ್ಲಿ ೧.೫೦ ಕೋಟಿ ರೂ. ಕೊಡುತ್ತೇವೆಂದು assurance ಕೊಡಲ್ಲವೆಂದರೆ ನಾನು ಪ್ರಶ್ನೆ ಕೇಳಿದ್ದಕ್ಕೆ ಏನು ಉತ್ತರ ಸಿಕ್ಕಿದ ಹಾಗೆ ಆಯಿತು? Design ಅನ್ನು ಅವರ ಇಲಾಖೆಯವರು approve ಮಾಡಿದ್ದಾರೆ, estimate ಅನ್ನು PWD ಯವರು approve ಮಾಡಿದ್ದಾರೆ. ಇದರಲ್ಲಿ ನನ್ನದೇನು ತಪ್ಪಿದೆ ಹೇಳಿ? ಇಲ್ಲವೆಂದರೆ ನನ್ನ ಕ್ಷೇತ್ರದಲ್ಲಿ ಆ ಭವನದ ಕೆಲಸ ಅರ್ಧಕ್ಕೇ ನಿಂತರೆ ಜನ ಏನೆಂದು ತಿಳಿದುಕೊಳ್ಳುತ್ತಾರೆ? ನಾನಂತೂ ನನ್ನ ಕರ್ತವ್ಯ ಮಾಡಿದ್ದೇನೆ. As an MLA I

have brought it to your notice, and the Government is notice many times. This is not the first time. ಸಾಕಷ್ಟು ಸಲ ನಾನು ಕೇಳಿದ್ದೆ. ನೀವು ಈ ರೀತಿ ಉತ್ತರ ಕೊಟ್ಟರೆ I am not ready to accept this answer. You have to protect my interest.

ಶ್ರೀ ಎನ್. ಸಂಪಂಗಿ:- ವಿಶ್ವ ಕನ್ನಡ ಸಮ್ಮೇಳನಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಂಥ ಕಟ್ಟಡಗಳ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಿದರೆ ಹೇಗೆ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ಇಲ್ಲವೆಂದರೆ ನಮಗೆ ಕಟ್ಟುವುದಕ್ಕಾಗುವುದಿಲ್ಲ, ಕೈಬಿಡುತ್ತೇವೆ ಎಂದು ಹೇಳಿಬಿಡಲಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸದಸ್ಯರಿಗೆ ನಾನು ತಮ್ಮ ಮೂಲಕ ವಿನಂತಿ ಏನು ಮಾಡಿದೆ ಎಂದರೆ, design ಅನ್ನು ನಾವೇ ಕೊಟ್ಟಿದ್ದೇವೆ, ಹಣವನ್ನು ಹೇಗೆ ಸಂಗ್ರಹ ಮಾಡಬೇಕೆಂದು plan ಅನ್ನೂ ನಾವೇ ಕೊಡುತ್ತಿದ್ದೇವಲ್ಲಾ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- Plan ಅಲ್ಲ, ಹಣ ಕೊಡಬೇಕು.

ಅಧ್ಯಕ್ಷರು:- ನೀವು ಇವರ ಹತ್ತಿರ ಮಾತನಾಡಿ.

ಅಧ್ಯಕ್ಷರು:- ತನ್ವೀರ್‌ಸೇಠ್‌ರವರೆ, ನೀವು ಪ್ರಶ್ನೆ ಕೇಳಿ.

(ಗೊಂದಲ)

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- I want a categorical reply. You have to protect my interest. ಇಲ್ಲವೆಂದರೆ, ನನ್ನ ಮತಕ್ಷೇತ್ರದಲ್ಲಿ ನಾನು ಏನು ಉತ್ತರ ಕೊಡಲಿ, ನೀವೇ ಹೇಳಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ ಎನ್ನುತ್ತಾರೆ, ನಾನು ನನ್ನ ಕೆಲಸ ಮಾಡಿದ್ದೇನೆಂದು ನಮ್ಮ ಜನರಿಗೆ ಹೇಳುತ್ತೇನೆ. ಅದಕ್ಕೆ ನಾನು

ಹೇಳುತ್ತಿದ್ದೇನೆ, ೩ ಕೋಟಿ ರೂ.ಗಳಲ್ಲಿ at least ೧.೫೦ ಕೋಟಿ ರೂ. ಗಳನ್ನಾದರೂ ಕೊಡಲಿ. ಇನ್ನುಳಿದ ೧.೫೦ ಕೋಟಿ ರೂಪಾಯಿಗಳನ್ನು ನಾನು ಎಲ್ಲಿಂದಲಾದರೂ ಹೊಂದಿಸಿ ಮಾಡುತ್ತೇನೆಂದರೂ ಅವರು ಒಪ್ಪುವುದಿಲ್ಲವೆಂದರೆ, I cannot accept this answer.

ಶ್ರೀ ಎನ್. ಸಂಪಂಗಿ:- ವಿಶ್ವ ಕನ್ನಡ ಸಮ್ಮೇಳನಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ಸೇಡಂ ಮತಕ್ಷೇತ್ರ ಆಂಧ್ರಪ್ರದೇಶದ ಗಡಿಭಾಗದಲ್ಲಿದೆ.ನಾವು ಅಲ್ಲಿ ಕನ್ನಡ ಉಳಿಸಬೇಕು, ಬೆಳೆಸಬೇಕೆಂದು ಹೋರಾಡುತ್ತಿದ್ದೇವೆ. ನೀವು ಈ ರೀತಿ ಉತ್ತರ ಕೊಟ್ಟರೆ ಉದ್ದೇಶ ಏನೆಂದು ನನಗೆ ಹೇಳಿ? Then it is a wasteful expenditure on the part of the Government to leave it unfinished. I need some protection from you.

ಅಧ್ಯಕ್ಷರು:- ಇನ್ನೂ ಒಂದು ಕೋಟಿ ರೂ. Extra ಕೊಡುವುದಕ್ಕೆ ಹೇಳುತ್ತೇನೆ.

ಶ್ರೀ ಎನ್. ಸಂಪಂಗಿ:- ವಿಶ್ವ ಕನ್ನಡ ಸಮ್ಮೇಳನಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:- ೪ ಕಡೆ ಭವನ ಕಟ್ಟಬೇಕೆಂದು ನಮ್ಮ budget ನಲ್ಲಿ provision ಇದ್ದದ್ದೇ ೫ ಕೋಟಿ ರೂ.

(ಗೊಂದಲ)

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ಇದು ೩ ವರ್ಷಗಳ ಹಿಂದಿನದು.

ಶ್ರೀ ಗೋವಿಂದ ಎಂ.ಕಾರಜೋಳ:- ಎಲ್ಲಿಂದ ಹಣ ತರುವುದು?

(ಗೊಂದಲ)

ಅಧ್ಯಕ್ಷರು:- ಸ್ವಲ್ಪ ಹಣ ಕೊಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಅದಕ್ಕೇ ನಾನು ಮಾನ್ಯ ಶಾಸಕರಲ್ಲಿ ವಿನಂತಿ ಮಾಡಿದೆ. ನಾವು ಅಷ್ಟು ಹಣ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು design ಮಾಡಿದ್ದಾರೆಂದು ಹೇಳುತ್ತಿದ್ದಾರೆ. ನಮ್ಮ ಹತ್ತಿರ ಇರುವವರು ಕಾರಕೂನರು. ಅವರಿಗೆ ಗೆರೆ ಹೊಡೆಯುವುದೂ ಗೊತ್ತಿಲ್ಲ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ನಾನು ನಿಮಗೆ documents ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:-ನಮ್ಮವರು design ಮಾಡಿಕೊಡುವುದಕ್ಕೆ ಅಸಾಧ್ಯ. ನಮ್ಮ ಹತ್ತಿರ ಇಂಜಿನಿಯರ್, architect, ಇಲ್ಲ. Estimate ಮಾಡುವವರು ಇಲ್ಲ. Plan ತಯಾರಿಸುವವರು ಇಲ್ಲ. Design ಮಾಡುವವರಿಲ್ಲ. ಹೀಗಿರುವಾಗ ಎಲ್ಲಿಂದ ಮಾಡುವುದು?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ತಮಗೆ documents ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:-ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಇನ್ನೂ ೨೫ ಲಕ್ಷ ರೂ. ಕೊಡುತ್ತೇನೆ. ಉಳಿದ ಹಣವನ್ನು ಶಾಸಕರ, ಸಂಸತ್ ಸದಸ್ಯರ ನಿಧಿಯಿಂದ ಮಾಡಬಹುದು.

(ಗೊಂದಲ)

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ - ಮಾನ್ಯ ಅಧ್ಯಕ್ಷರೆ, ೫೦% ಹಣವನ್ನಾದರೂ ಕೊಡುವುದಕ್ಕೆ ಆದೇಶ ಮಾಡಿ. You have the right. You can direct them to give ೫೦%.

(ಗೊಂದಲ)

ಅಧ್ಯಕ್ಷರ: ಇನ್ನೂ ಸ್ವಲ್ಪ ಹಣ ಕೊಡಿ.

(ಗೊಂದಲ)

ಅಧ್ಯಕ್ಷರು:- ಕೊಡಿ. ೫೦ ಲಕ್ಷ ರೂ. ಆದರೂ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಶಾಸಕರು ನನ್ನ ಹತ್ತಿರ ಬರಲಿ. ಬೆಂಗಳೂರಿಗೆ ಹೋದ ನಂತರ ವಿಧಾನಸೌಧದಲ್ಲಿ file ತರಿಸಿ ತಮಗೆ ತೋರಿಸುತ್ತೇನೆ. ನನ್ನ ಪರಿಸ್ಥಿತಿ ಏನಿದೆ ಎನ್ನುವುದನ್ನು ನೋಡಿ.

ಅಧ್ಯಕ್ಷರು:- Assurance ಕೊಡಿ.

(ಗೊಂದಲ)

ಅಧ್ಯಕ್ಷರು:- Assurance ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:- ಅವರು ನಮ್ಮ ಕಛೇರಿಗೆ ಬರಲಿ. ಅವರ ಕಳಕಳಿ ನನಗೆ ಅರ್ಥವಾಗಿದೆ.

ಅಧ್ಯಕ್ಷರು: ಚರ್ಚೆ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

ನ್ಯಾಯಾಲಯಗಳ ಆದೇಶದನುಸಾರ ಹಿಂಬಡ್ತಿ.

53 : (551)

ಶ್ರೀ ತನ್ವೀರ್ ಸೇಠ್ (ನರಸಿಂಹರಾಜು)

ಅ. ಪದವಿ ಆಧಾರದ ಮೇಲೆ JTO ಹುದ್ದೆಯಿಂದ ನೇರವಾಗಿ ಪ್ರಾಚಾರ್ಯರ ಹುದ್ದೆಗೆ ನೀಡಲಾದ ಮುಂಬಡ್ತಿಯನ್ನು ಕಾನೂನು-ಬಾಹಿರವೆಂದು ಹಿಂದೆಯೇ KAT ಯು ಮುಂಬಡ್ತಿ ಆದೇಶಗಳನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯ ಆದೇಶವನ್ನು ಕಡೆಗಣಿಸಿ, ಷರತ್ತು ವಿಧಿಸಿ ಉನ್ನತ ಹುದ್ದೆಗೆ ಮುಂಬಡ್ತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಮುಂಬಡ್ತಿ ಪಡೆದ ಅಭ್ಯರ್ಥಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ (KAT)ಯ ಆದೇಶವನ್ನು ಪ್ರಶ್ನಿಸಿ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಹೋದಾಗ ಉಚ್ಚ ನ್ಯಾಯಾಲಯವು ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯ ಆದೇಶವನ್ನು ಎತ್ತಿಹಿಡಿದು ಮೇಲ್ಮನವಿಯನ್ನು ವಜಾ ಮಾಡಿರುವುದು ನಂತರ ಈ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಮೊರೆ